ಅಧ್ಯಕ್ಷರು : ಸೋಮಶೇಖರ್‌ರವರೆ, ಅವರಿಗೆ ಹೇಳಿಕೆಕಳುಹಿಸಲಾಗಿದೆ. ಬಂದ ಮೇಲೆ ಮಾತನಾಡಿ, ಅಲ್ಲಿಯವರೆಗೆ ಬೇರೆ ಸದಸ್ಯರು ಮಾತನಾಡುತ್ತಾರೆ.

(ಆ) ಭದ್ರಾವತಿಯಲ್ಲಿನ ಎಂ.ಪಿ.ಎಂ. ಕಾರ್ಖಾನೆಗೆ ಬೆಂಕಿ ಬಿದ್ದಿರುವ ಬಗ್ಗೆ.

ಶ್ರೀ ಎಶ್ವೇಶ್ವರ ಹೆಗಡೆ ಕಾಗೇರಿ : ಉಸ್ತುವಾರಿ ಸಚಿವರು ಹಾಗೂ ಗೃಹ ಸಚಿವರು ಸದನದಲ್ಲಿ ಉಪಸ್ಥಿತರಿದ್ದಾರೆ, ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ ಎಂ.ಪಿ.ಎಂ. ಕಾರ್ಖಾನೆಗೆ ಬೆಂಕಿಬಿದ್ದು ಕೋಟ್ಯಾಂತರ ರೂಪಾಯಿಗಳ ನಷ್ಟವಾಗಿದೆ, ಆ ಬಗ್ಗೆ ಹೇಳಿಕೆ ನೀಡಿದರೆ ಒಳ್ಳೆಯದು.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) : ಅಲ್ಲಿ ಎಂ.ಪಿ.ಎಂ. ಕಾರ್ಖಾನೆಯಲ್ಲಿ ಬೊಗಸ್ ಸ್ಟಾಕ್ ಇತ್ತು ಅದಕ್ಕೆ ಬೆಂಕಿ ಬಿದ್ದು ನಷ್ಟವಾಗಿದೆ. ಈಗ ನನಗೆ ಬಂದ ವರದಿಯ ಪ್ರಕಾರ ಸುಮಾರು ಒಂದು ಲಕ್ಷ ಟನ್‌ನಷ್ಟು ಬೊಗಾಸ್ ಸುಟ್ಟುಹೋಗಿದೆ ಆದರೆ ಅದರ ಬೆಲೆ ಗೊತ್ತಿಲ್ಲ. ಎಸ್.ಪಿ. ಯವರನ್ನು ಸಂಪರ್ಕಿಸಲು ಪ್ರಯತ್ನಿಸಿದಾಗ ಅವರು ಆಲಮಟ್ಟಿಯಲ್ಲಿದ್ದಾರೆ. ಡಿ.ಸಿ. ಯವರೂ ಕೂಡ ಅಲ್ಲಿದ್ದಾರೆ. ಕರಾರುವಕ್ಕಾಗಿ ಮಾಹಿತಿಯನ್ನು ಪಡೆದುಕೊಂಡು ನಾಳೆ ಸದನದಲ್ಲಿ ಹೇಳಿಕೆ ನೀಡಲಾಗುವುದು.

ಶ್ರೀ ಎಶ್ವೇಶ್ವರ ಹೆಗಡೆ ಕಾಗೇರಿ : ಅದು ಲಾಭದಲ್ಲಿರುವಂಥ ಒಂದು ಒಳ್ಳೆ ಸಂಸ್ಥೆ. ಇತ್ತೀಚೆಗೆ ಅದನ್ನು ಖಾಸಗೀಕರಣ ಮಾಡುತ್ತಾರೆಂದು ದಿನ ಬೆಳಿಗ್ಗೆ ಪತ್ರಿಕೆಗಳಲ್ಲಿ ಬರುತ್ತಿದೆ. ಪಾಂಡವಪುರದಲ್ಲಿನ ಸಕ್ಕರೆ ಕಾರ್ಖಾನೆಗೂ ಬೆಂಕಿ ಬಿತ್ತು. ಅಂದರೆ ಈ ರೀತಿ ಯಾವ ಕಾರಣದಿಂದ ಬೆಂಕಿ ಬಿತ್ತು ಎಂಬುದು ಗೊತ್ತಾಗಬೇಕು. ಏತಕ್ಕೆ ಬಿತ್ತು. ಹೇಗೆ ಬಿತ್ತು ಎಂಬುದನ್ನು ಸದನಕ್ಕೆ ತಿಳಿಸಬೇಕು. ಅಲ್ಲಿರುವುದೆಲ್ಲಾ ನಮ್ಮ ಸರ್ಕಾರದ ಹಣ.

(ಇ) ಕರ್ನಾಟಕ ಕೈಮಗ್ಗ ನಿಗಮದಲ್ಲಿ ಆಗಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ.

ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಕೈಮಗ್ಗದ ನಿಗಮದಲ್ಲಿ ಸುಮಾರು 6-8 ಕೋಟಿ ರೂಪಾಯಿಗಳಷ್ಟು ಅವ್ಯವಹಾರವಾಗಿ ಹಣ ದುರುಪಯೋಗವಾಗಿದೆ ಎಂದು ಸುದ್ದಿ ಇದೆ. ಅದರಲ್ಲಿ ಮುಂಗಡ ಹಣ ಕೊಟ್ಟಿರುವುದು, ಎಳೆಗಳಿಗೆ ಗಂಜಿ ಹಾಕುವುದು, ರಸಾಯನಿಕ ಪದಾರ್ಥಗಳನ್ನು ಕೊಟ್ಟಿರುವುದು ಹಾಗೂ ಒಂದೇ ಬಿಲ್ಲಿಗೆ ಎರಡು ಸಾರಿ ಹಣ ಪಾವತಿ ಮಾಡಿರುವುದು, ಅಲ್ಲಿರುವ ಅಧಿಕಾರಿಗಳು ಶಾಮೀಲಾಗಿರುವುದರಿಂದ ಕಳೆದ ಹತ್ತಾರು ವರ್ಷಗಳಿಂದ ನಡೆದುಕೊಂಡು ಬಂದು ಸುಮಾರು ಎಂಟು ಕೋಟಿ ರೂಪಾಯಿಗಳಷ್ಟು ಹಣ ದುರುಪಯೋಗವಾಗಿದೆ. ಸುದ್ದಿಯನ್ನು ತಿಳಿದು ಮಂತ್ರಿಗಳೂ ಕೂಡ ಆ ಕೈಮಗ್ಗ ನಿಗಮಕ್ಕೆ ಈ ರೀತಿಯ ಅವ್ಯವಹಾರದ ಬಗ್ಗೆ ವಿಚಾರಣೆಯಾಗಬೇಕೆಂದು ಪತ್ರವನ್ನೂ ಕೂಡ ಬರೆದಿದ್ದಾರೆ. ಈಗಾಗಲೇ ಸರ್ಕಾರದ ಕೈಮಗ್ಗ ನಿಗಮ ನಷ್ಟದಲ್ಲಿದೆ. ಈ ಬಗ್ಗೆ ಸಿಓಡಿ ತನಿಖೆಯಾಗಬೇಕೆಂದು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

+ **ಶ್ರೀ ಎಂ. ಮಹಾದೇವ (ರೇಷ್ಮೆ ಸಚಿವರು) :** ಮಾನ್ಯ ಸದಸ್ಯರು ಹೇಳಿದಂತೆ ಕೆಲವು ಅಕ್ರಮವಾಗಿರುವುದು ನಿಜ. ಬಹುಶಃ ನಾನು ಅಲ್ಲಿ ಅಧ್ಯಕ್ಷನಾದ ಮೇಲೆ ಆ ಬಗ್ಗೆ ಕೂಲಂಕುಷವಾಗಿ

ವಿಚಾರ ಮಾಡುತ್ತಿದ್ದೆ, ಮೂರು ತಿಂಗಳ ಕಾಲ ಅಲ್ಲಿ ಏನು ಲೋಪದೋಷಗಳಾಗಿದ್ದಾವೆ, ಆ ಬಗ್ಗೆ ಗಂಭೀರವಾಗಿ ಅಧ್ಯಯನ ಮಾಡಿದ್ದೇನೆ. ಅಲ್ಲಿ ಬೋಗಸ್ ಬಿಲ್ ಆಗಿದ್ದಾವೆ. ಎರಡೆರಡು ಸಾರಿ ಪೇಮೆಂಟ್ ಆಗಿದ್ದಾವೆ. ಸಾಮಗ್ರಿಗಳನ್ನು ವಿತರಣೆ ಮಾಡುವ ಸಂದರ್ಭದಲ್ಲೂ ಅಕ್ರಮಗಳಾಗಿದ್ದಾವೆ, ಯಾರು ಫಲಾನುಭವಿಗಳಿದ್ದಾರೆ ಅವರಿಗೆ ಹಣ ಪಾವತಿ ಮಾಡುವ ವಿಚಾರದಲ್ಲೂ ಕೂಡ ಅಕ್ರಮ ಅವ್ಯವಹಾರಗಳಾಗಿದ್ದಾವೆ. ಈ ಬಗ್ಗೆ ಸಮಗ್ರ ತನಿಖೆಯಾಗಬೇಕೆಂದು ನಾನೆ ಸರ್ಕಾರಕ್ಕೆ ಆದೇಶವನ್ನು ಕೊಟ್ಟಿದ್ದೇನೆ. ಅಲ್ಲಿರುವ ಅಧಿಕಾರಿಗಳು ಇದನ್ನು ಪದೇ ಪದೇ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಆ ನಿಗಮ ಇಷ್ಟೊಂದು ಕಷ್ಟದಲ್ಲಿರಲು ಏನು ಕಾರಣ, ಹಣಕಾಸಿನ ತೊಂದರೆಗೆ ಏನು ಮೂಲ ಕಾರಣವೆಂದು ನಾನೇ ವೈಯಕ್ತಿಕವಾಗಿ ಗಂಭೀರವಾಗಿ ಚಿಂತನೆಯನ್ನು ಮಾಡಿದ್ದೇನೆ. ಆ ನಿಗಮದಲ್ಲಿ ಅಂದರೆ ಹುಬ್ಬಳ್ಳಿಯಲ್ಲಿ ಎರಡು ಯುನಿಯನ್‌ಗಳಿದ್ದಾವೆ, ಅಲ್ಲಿರುವ ಅಧಿಕಾರಿಗಳು ಆ ಯುನಿಯನ್‌ಗಳ ಪೋಷಕರಾಗಿದ್ದಾರೆಂದು ಈಗ ಬೆಳಕಿಗೆ ಬಂದಿದೆ. ಯಾವುದಾದರೂ ಅಧಿಕಾರಿಗಳ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದಾಗ ಅಥವಾ ಏನಾದರೂ ಅಕ್ರಮಗಳು ನಡೆದಾಗ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದಾಗ, ಅವರು ಯಾವುದಾದರೊಂದು ನೆಪವೊಡ್ಡಿ, ದುಡ್ಡು ಸಾಲಲಿಲ್ಲ, ನೂಲು ಸರಬರಾಜು ಆಗಿಲ್ಲ, ವಿತರಣೆಯಾಗಿಲ್ಲ ಹೀಗೆಲ್ಲಾ ಹೇಳಿ, ಇದಕ್ಕೆ ಅಧಿಕಾರಿಗಳು ಬೆಂಬಲ ಕೊಟ್ಟು, ಸರ್ಕಾರದ ವಿರುದ್ಧ, ಮಂತ್ರಿಗಳ ವಿರುದ್ಧ ಸ್ಟ್ರೈಕ್ ಮಾಡಿಸುವಂಥಾದ್ದು, ನಮ್ಮ ಪ್ರತಿಕೃತಿಗಳನ್ನು ಸುಡತಕ್ಕಂಥಾದ್ದು ಪದೇ ಪದೇ ನಡೆಯುತ್ತಿದೆ. ಒಂದು ಸಲ ನಾನು ಅಲ್ಲಿಗೆ ಭೇಟಿ ಕೊಟ್ಟು, ಈ ಬಗ್ಗೆ ವಿಧಾನಸಭೆಯಲ್ಲಿ ಚರ್ಚೆಯಾಗುತ್ತಿದೆ, ನಾವು ಹಣ, ನೂಲು ಎಲ್ಲವನ್ನೂ ಕೊಡುತ್ತಿದ್ದರೂ ಏಕೆ ಈ ರೀತಿಯಾಗುತ್ತಿದೆ ಎಂದು ವಿಚಾರ ಮಾಡಿದಾಗ ಎಲ್ಲಾ ವಿಚಾರಗಳು ಬೆಳಕಿಗೆ ಬಂದವು. ವಿದ್ಯಾವಿಕಾಸ ಯೋಜನೆಯಲ್ಲಿ ಕೊಡಬೇಕಾದ ಗುಣಮಟ್ಟದ ಬಟ್ಟೆಗಳನ್ನು ಒಂದು ವಾರದಲ್ಲಿ ಕೊಡದೇ ಹೋದರೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು 2-3 ಅಧಿಕಾರಿಗಳಿಗೆ ನೋಟಿಸ್ ಕೊಟ್ಟಿ. ಕ್ವಾಲಿಟಿ ಇನ್ಸ್‌ಪೆಕ್ಟರ್ಸ್ ಸರಿಯಾಗಿ ನೋಡಿಕೊಳ್ಳಬೇಕು, ನೂಲು ಸರಬರಾಜು ಮಾಡುವವರು ಸರಿಯಾಗಿ ಸೂಪರ್‌ವೈಸ್ ಮಾಡಬೇಕು, ಅಲ್ಲೇನಾದರೂ ಅಕ್ರಮಗಳು ನಡೆದದ್ದು ಕಂಡು ಬಂದರೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ನೋಟಿಸ್ ಕೊಟ್ಟೆ. ಹೀಗೆ ನೋಟೀಸ್ ಕೊಟ್ಟ ಎರಡನೇ ದಿವಸಕ್ಕೆ ಅಲ್ಲಿ ಸ್ಟ್ರೈಕ್ ಪ್ರಾರಂಭವಾಯಿತು. ಸರ್ಕಾರ ಹಣ ಕೊಟ್ಟಿಲ್ಲ, ನೂಲು ಕೊಟ್ಟಿಲ್ಲ ಅದಕ್ಕಾಗಿ ಸ್ಟ್ರೈಕ್ ಮಾಡುತ್ತಿದ್ದಾರೆ ಎಂದು ಆ ಭಾಗದಿಂದ ಬಂದಿರುವ, ನೇಕಾರರ ಹಿತ ಕಾಪಾಡತಕ್ಕಂಥ ಅನೇಕ ಮಾನ್ಯ ಸದಸ್ಯರುಗಳು ಹೇಳುತ್ತಾರೆ. ನಾನು ಈ ಬಗ್ಗೆ ಕಛೇರಿಯಲ್ಲಿ ವಿಚಾರಿಸಿ ಮಾಡಿದ್ದೇನೆ, ಸಕಾಲದಲ್ಲಿ ಹಣವನ್ನೂ ಕೊಟ್ಟಿದ್ದೇವೆ, ನೂಲನ್ನೂ ಕೊಟ್ಟಿದ್ದೇವೆ, ಆದರೂ ಅಲ್ಲಿ ಸ್ಟ್ರೈಕ್ ನಡೆಯುತ್ತಿದೆ. ಇದರ ಹಿನ್ನೆಲೆಯನ್ನು ವಿಚಾರಿಸಿದಾಗ ಅಕ್ರಮಗಳು ಹೊರಗಡೆ ಬಂದವು. ಅಲ್ಲಿ ಸುಮಾರು 400 ಜನ ಅಧಿಕಾರಿಗಳು ಎಕ್ಸೆಸ್ ಇದ್ದಾರೆ. ಈ ಅಧಿಕಾರಿಗಳಿಗೆ ಅಲ್ಲಿ ಏನೂ ಕೆಲಸವಿಲ್ಲ. ನಾವು ನೇಕಾರರಿಗೆ ಸಹಾಯ ಮಾಡುವುದಕ್ಕಿಂತ ಇವರನ್ನು ಪೋಷಣೆ ಮಾಡತಕ್ಕಂಥಾದ್ದೇ ಜಾಸ್ತಿಯಾಗಿದೆ. ಸುಮಾರು 10 ಕೋಟಿ ರೂಪಾಯಿಗಳಷ್ಟು ಸಂಬಳ ಇವರಿಗೆ ಹೋಗುತ್ತಿದೆ. ಇವರಿಗೆ ಸಾಕಷ್ಟು ಕೆಲಸವೂ ಇಲ್ಲ, ಸರ್ಕಾರ ನೇಕಾರರಿಗೆ ಕೊಡತಕ್ಕಂಥ ಫೆಸಿಲಿಟಿಗಳನ್ನು ಅವರಿಗೆ ತಲುಪಿಸುವುದಕ್ಕೆ ಸಹಾಯವನ್ನೂ ಮಾಡುತ್ತಿಲ್ಲ, ಸರ್ಕಾರದ ಯೋಜನೆಗಳ ಬಗ್ಗೆ ಇವರು ಚಿಂತನೆಯನ್ನೂ ಮಾಡುತ್ತಿಲ್ಲ. ಹೀಗೆ ಅಕ್ರಮ ವ್ಯವಹಾರಗಳನ್ನು

ಮಾಡಿಕೊಂಡಿರುವ ಪಟ್ಟಭದ್ರ ಹಿತಾಸಕ್ತಿಗಳ ಒಂದು ದೊಡ್ಡ ಜಾಲವೇ ಅಲ್ಲಿ ಇದೆ. ಈ ಜಾಲವನ್ನು ಭೇದಿಸಬೇಕಾಗಿದ್ದರೆ ನಾವು ಕಠಿಣವಾದಂಥ ಕ್ರಮ ತೆಗೆದುಕೊಳ್ಳುವುದು ಅವಶ್ಯಕವಾಗಿದೆ. ಇವತ್ತು ಅದನ್ನು ತೆಗೆದುಕೊಂಡಿದ್ದೇವೆ. ಅಲ್ಲಿಗೆ ಹೊಸ ಎಂ.ಡಿ. ಬಂದು ಒಂದು ವಾರವಾಗಿದೆ. ಈ ಅಕ್ರಮಗಳ ಬಗ್ಗೆ ತಪಾಸಣೆ ಮಾಡಿ ವರದಿಯನ್ನು ಕೊಡಿ ಎಂದು ಹೇಳಿದ್ದೇನೆ. ಅವರು ವರದಿಯನ್ನು ಕೊಟ್ಟ ಕೂಡಲೇ ನಾವು ಅಗತ್ಯ ಕ್ರಮ ತೆಗೆದುಕೊಳ್ಳುತ್ತೇವೆ. ಯಾರು ಅಕ್ರಮವಾಗಿ ತಿಂದಿದ್ದಾರೆ, ಇಷ್ಟು ದಿವಸಗಳಿಂದ ಬಡವರ ರಕ್ತ ಹೀರಿ ಬಡ ನೇಕಾರರಿಗೆ ತೊಂದರೆ ಕೊಟ್ಟಿದ್ದಾರೆ, ಸರ್ಕಾರಕ್ಕೆ ಮೋಸ ಮಾಡಿದ್ದಾರೆ, ಇವರನ್ನು ನಾವು ಸುಮ್ಮನೆ ಬಿಡುವುದಿಲ್ಲ. ಸರ್ಕಾರ ಕಠಿಣವಾದಂಥ ಕ್ರಮವನ್ನು ತೆಗೆದುಕೊಳ್ಳುತ್ತದೆ. ಇದರ ಬಗ್ಗೆ ವಿಚಾರಣೆಗಾಗಿ ಸರ್ಕಾರದಿಂದ ಆದೇಶ ಕೊಟ್ಟಿದ್ದೇನೆ, ವರದಿಗಾಗಿ ಕಾಯುತ್ತಿದ್ದೇನೆ. ಇವರ ಮೇಲೆ ಕ್ರಿಮಿನಲ್ ಕೇಸ್‌ಗಳನ್ನು ಲಾಡ್ಜ್ ಮಾಡಿ, ಇವರಿಂದ ರಿಕವರಿ ಮಾಡಿ ಎಂದೂ ಹೇಳಿದ್ದೇನೆ. ಆ ವರದಿ ಬಂದ ಕೂಡಲೇ, ಅದರ ಆಧಾರದ ಮೇಲೆ ಯಾವ ರೀತಿಯ ತನಿಖೆಯನ್ನು ಮಾಡಬೇಕು ಎನ್ನುವ ನಿರ್ಧಾರವನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎಂದು ನಾನು ಈ ಸದನದಲ್ಲಿ, ತಮಗೆ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಸಚಿವರು ಸಮಗ್ರ ತನಿಖೆಗೆ ಒಳಪಡಿಸಲಾಗುತ್ತಿದೆ ಎಂದು ಹೇಳಿದರು. ತನಿಖೆಯನ್ನು ಆ ಇಲಾಖೆಯವರೇ ಮಾಡುವುದೇ ಅಥವಾ ಯಾರಿಂದ ತನಿಖೆ ಮಾಡಿಸಲಾಗುತ್ತಿದೆ. ಅಲ್ಲಿ ಅವ್ಯವಹಾರವಾಗಿದೆ, ದುರುಪಯೋಗವಾಗಿದೆ, ಯೂನಿಯನ್‌ಗಳವರು ಮತ್ತು ಅಧಿಕಾರಿಗಳು ಅಕ್ರಮದಲ್ಲಿ ಶಾಮೀಲಾಗಿದ್ದಾರೆ ಎನ್ನುವುದನ್ನೆಲ್ಲಾ ತಾವು ಹೇಳಿದ್ದೀರಿ. ತಮ್ಮ ಈ ಪ್ರಯತ್ನಕ್ಕೆ ನಾನು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ಆದರೆ ವರದಿ ಕೊಡುವುದಕ್ಕೆ ಯಾರನ್ನು ನೇಮಕ ಮಾಡಿದ್ದೀರಿ ಎಂದು ಹೇಳಬೇಕು. ಮತ್ತು ಎಕ್ಸಸ್ ಇರುವಂಥ 400 ಜನರನ್ನು ವಿ.ಆರ್.ಎಸ್. ಅಡಿಯಲ್ಲಿ ತೆಗೆಯುವ ಪ್ರಯತ್ನವನ್ನು ಮಾಡುವಿರಾ? ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೂ ಬಜೆಟ್‌ನಲ್ಲಿ ಹೇಳಿದ್ದಾರೆ. ವಿ.ಆರ್.ಎಸ್. ಅನ್ನು ಇಂಟ್ರೊಡ್ಯೂಸ್ ಮಾಡುತ್ತೇವೆ, ಅದಕ್ಕೆ 100 ಕೋಟಿ ರೂಪಾಯಿಗಳ ಹಣವನ್ನು ಇಟ್ಟಿದ್ದೇವೆ, ಸೆಕ್ಷನ್ 285 ಅನ್ನು ಹಾಕಿ ಭ್ರಷ್ಟರು ಮತ್ತು ಸರಿಇಲ್ಲದ ಅಧಿಕಾರಿಗಳನ್ನು ತೆಗೆಯಲಾಗುವುದು ಎನ್ನುವುದನ್ನು ಮುಂಗಡಪತ್ರದಲ್ಲಿ ಸೂಚಿಸಿದ್ದಾರೆ. ಇವರು ಬೆಂಬಲ ಕೊಟ್ಟು ತಮ್ಮ ಪ್ರತಿಕೃತಿಗಳನ್ನು ಸುಡುವಂಥಾದ್ದು, ನೋಟಿಸ್ ಕೊಟ್ಟ ಮರುದಿವಸವೇ ಸ್ಟ್ರೈಕ್ ಮಾಡಿಸುವಂಥಾದ್ದು, ಇವರ ಹತೋಟಿಯಲ್ಲಿ ಯೂನಿಯನ್‌ಗಳಿದ್ದು, ಇವರ ಅಧೀನದಲ್ಲಿ ಸರ್ಕಾರ ನಡೆಯಬೇಕು ಎಂದರೆ ಅದು ನಿಜವಾಗಿಯೂ ತಲೆತಗ್ಗಿಸುವಂಥ ವಿಚಾರ. ಅಂಥವರನ್ನು ಹೊರ ಹಾಕಲು ವಿ.ಆರ್.ಎಸ್. ವ್ಯವಸ್ಥೆ ಮಾಡಿ, ಅವರನ್ನು ಬಲಿಹಾಕುವಂಥ ಪ್ರಯತ್ನ ತಮ್ಮಿಂದ ಆಗಬೇಕು. ಅದನ್ನು ತಾವು ತಿಳಿಸಬೇಕು ಎಂದು ಕೇಳುತ್ತೇನೆ.

ಶ್ರೀ ಎಂ. ಮಹದೇವ : ಹೊಸ ಎಂ.ಡಿ. ಯವರಿಗೆ ತನಿಖೆ ಮಾಡಲು ನಾನು ಆದೇಶವನ್ನು ಕೊಟ್ಟಿದ್ದು, ಮೊದಲನೇ ವರದಿಯನ್ನು ಕೊಡಿ ಎಂದು ಕೇಳಿದ್ದೇನೆ. ಮೊದಲನೇ ವರದಿ ಬಂದ ಕೂಡಲೇ ಸಂಬಂಧಪಟ್ಟವರ ಮೇಲೆ ನಾನು ಸಸ್ಪೆನ್‌ಷನ್ ಆರ್ಡ್ಲ್ ಮಾಡಲು ತೀರ್ಮಾನ ಮಾಡಿದ್ದೇನೆ. ವರದಿ ಬಂದ ನಂತರ ನಾವು ಮತ್ತೆ ತನಿಖೆಗೆ ಆರ್ಡ್ಲ್‌ಯನ್ನು ಮಾಡುತ್ತೇವೆ.

ವಿ.ಆರ್.ಎಸ್. ಅನ್ನು ತರುವ ಬಗ್ಗೆ ನಾವು ಗಂಭೀರವಾಗಿ ವಿಚಾರ ಮಾಡುತ್ತಿದ್ದೇವೆ. ಕೈಮಗ್ಗ ನಿಗಮ ಉಳಿಯಬೇಕಾದರೆ, ನೇಕಾರರಿಗೆ ನಾವು ನಿಜವಾದಂಥ ಸರ್ವೀಸ್ ಅನ್ನು ಮಾಡಬೇಕಾದರೆ, ನಿಗಮದ ಉದ್ದೇಶ ನೆರವೇರಬೇಕಾದರೆ, ವಿ.ಆರ್.ಎಸ್. ಅನ್ನು ಇಂಟ್ರೊಡ್ಯೂಸ್ ಮಾಡಿ ಅವರನ್ನು ತೆಗೆಯದಿದ್ದರೆ ಸಾಧ್ಯವಾಗುವುದಿಲ್ಲ. ಅವರನ್ನು ತೆಗೆಯಲು ನಾವು ಖಂಡಿತವಾಗಿ ಪ್ರಯತ್ನವನ್ನು ಮಾಡುತ್ತೇವೆ. ಇದು ನಿನ್ನೆ, ಮೊನ್ನೆ ಪ್ರಾರಂಭವಾಗಿರುವ ವಿಚಾರವಲ್ಲ, ಇದು 1993 ರಿಂದಲೂ ಪ್ರಾರಂಭವಾಗಿದೆ. ಇದರ ಬಗ್ಗೆ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯಲ್ಲೂ ಕಾಮೆಂಟ್ಸ್ ಆಗಿದೆ, ಆಡಿಟ್ ರಿಪೋರ್ಟ್ ಸಹ ಬಂದಿದೆ. ನಾನು ವಿಜಿಲೆನ್ಸ್ ಸೆಲ್‌ಅನ್ನು ಅಪಾಯಿಂಟ್ ಮಾಡಿದ ಕೂಡಲೇ ಇಷ್ಟೆಲ್ಲಾ ಬೆಳಕಿಗೆ ಬಂದವು. ಅಲ್ಲಿಯವರೆಗೂ ಇದ್ಯಾವುದೂ ಬೆಳಕಿಗೆ ಬಂದಿರಲಿಲ್ಲ. ನಾನು ಗಂಭೀರವಾಗಿ ಇದನ್ನು ತೆಗೆದುಕೊಂಡಿದ್ದೇನೆ. ಮೊದಲು ಇವನ್ನು ಶುದ್ಧ ಮಾಡಿ ನಂತರ ನೇಕಾರರಿಗೆ ಒಳ್ಳೆಯದು ಮಾಡಲು ಪ್ರಯತ್ನ ಮಾಡುತ್ತೇವೆ. ತಪ್ಪಿಸ್ಥರ ವಿರುದ್ಧ ಸರ್ಕಾರ ಕಠಿಣವಾದಂಥ ಕ್ರಮವನ್ನು ತೆಗೆದುಕೊಳ್ಳುತ್ತದೆ ಎಂದು ಹೇಳುತ್ತೇನೆ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ, ಈ ವಿಚಾರ ತಮ್ಮ ಗಮನಕ್ಕೆ ಈಗ ಬಂದಿದೆ ಎನ್ನುವ ಮಾತನ್ನು ಹೇಳುತ್ತಿದ್ದೀರಿ. ಕಳೆದ ಮೂರು ವರ್ಷಗಳ ಹಿಂದೆ, ಕೆ.ಹೆಚ್.ಡಿ.ಸಿ. ಯಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ಇದೇ ಸದನದಲ್ಲಿ ಚರ್ಚೆಯಾಗಿ, ನಮ್ಮಿಂದ ಸುಮಾರು ನಾಲ್ಕು ಗಂಟೆಗಳ ಕಾಲ ಧರಣಿಯಾಗಿ, ಅದನ್ನು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ವರ್ಗಾಯಿಸಿ, ಅವರು ತನಿಖೆ ಮಾಡಿ ವರದಿಯನ್ನು ಕೊಡಬೇಕು ಎಂದು ಆಗಿತ್ತು. ಈಗಿನ ತಮ್ಮ ಪಕ್ಷದ ಅಧ್ಯಕ್ಷರಾದ ವಿ.ಎಸ್. ಕೌಜಲಗಿಯವರು ಆಗ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಅಧ್ಯಕ್ಷರಾಗಿದ್ದು, ಅವರು ಇದರಲ್ಲಿ ನಡೆದಿರುವ ಅವ್ಯವಹಾರಗಳ ಬಗ್ಗೆ ತನಿಖೆಯನ್ನು ಮಾಡಿ, ಸಮಗ್ರವಾದಂಥ ವರದಿಯನ್ನು ಸಭಾಧ್ಯಕ್ಷರ ಮೂಲಕ ಈ ಸದನಕ್ಕೆ ಒಪ್ಪಿಸಿದ್ದರು. ಕೆ.ಹೆಚ್.ಡಿ.ಸಿ. ಯಲ್ಲಿ ಆಗಿರುವಂಥ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರದ ಬಗ್ಗೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಈಗಾಗಲೇ ವರದಿ ಕೊಟ್ಟಿದೆ. ಆದರೆ ಇವತ್ತಿನವರೆಗೂ ಏನು ಕ್ರಮವಾಗಿಲ್ಲ. ತಾವು ಈ ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡ ಮೇಲೆ, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ವರದಿಯ ಆಧಾರದ ಮೇಲೆ ಯಾರಾದರೂ ಒಬ್ಬರ ಮೇಲಾದರೂ ಕ್ರಮ ತೆಗೆದುಕೊಂಡಿರುವಿರಾ ಎನ್ನುವುದನ್ನು ಹೇಳಿ. ಇವತ್ತು ನಡೆದಿರುವುದು ಬೇರೆ ಒಂದು ಮಾತು. ಕಳ್ಳಬಿಲ್ಲುಗಳನ್ನು ಹಾಕಿ ತಮಿಳುನಾಡಿನಲ್ಲಿ ಲಕ್ಷಾಂತರ ರೂಪಾಯಿಗಳ ಝರಿಯನ್ನು ಕೊಂಡುಕೊಂಡಿದ್ದು, ಗುಜರಾತ್, ರಾಜಸ್ಥಾನದಿಂದ ಪಡೆದಂಥದ್ದೆಲ್ಲವೂ ಆ ವರದಿಯಲ್ಲಿ ಇದೆ. ಇಷ್ಟೆಲ್ಲಾ ಇದ್ದರೂ ಇವತ್ತಿನವರೆಗೂ ತಾವು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ವರದಿಯ ಮೇಲೆ ಆ್ಯಕ್ಷನ್ ಟೇಕನ್ ರಿಪೋರ್ಟ್ ಏನಾಗಿದೆ ಎನ್ನುವುದನ್ನು ಹೇಳಿ.

ಶ್ರೀ ಪಿ.ಹೆಚ್. ಪೂಜಾರ್ : ಮಾನ್ಯ ಅಧ್ಯಕ್ಷರೇ, ಕೈಮಗ್ಗ ನಿಗಮ ಸ್ಥಾಪನೆಯಾದಾಗ ನೇಕಾರರ ಹಿತವನ್ನು ಸಂಪೂರ್ಣವಾಗಿ ಕಾಪಾಡಬೇಕು ಎನ್ನುವ ಉದ್ದೇಶವಿತ್ತು. ಆದರೆ ದೌರ್ಭಾಗ್ಯದಿಂದ ಇವತ್ತು ಆ ಉದ್ದೇಶ ಈಡೇರುವ ಮೊದಲೇ ಆ ಸಂಸ್ಥೆ ನೆಲ ಕಚ್ಚುವಂಥ, ದಿವಾಳಿಯಾಗುವಂಥ ದುಸ್ಥಿತಿಯನ್ನು ನೋಡುತ್ತಿದ್ದೇವೆ, ನೇಕಾರರ ಕಲ್ಯಾಣದ

ಉದ್ದೇಶವನ್ನಿಟ್ಟುಕೊಂಡು ಸ್ಥಾಪನೆಯಾದಂಥ ಆ ಸಂಸ್ಥೆ ಇವತ್ತು ನೇಕಾರರ ಖಳನಾಯಕನಂತೆ ವರ್ತಿಸುವ ದುಸ್ಥಿತಿಯನ್ನು ಕಾಣುತ್ತಿದ್ದೇವೆ. ಇದುವರೆಗೆ ವಿಶೇಷವಾದಂಥ ಸಮಗ್ರವಾದ ತನಿಖೆಯನ್ನು ಕೈಗೊಳ್ಳಬೇಕು. ಇವತ್ತಿನವರೆಗೆ ಎಲ್ಲಾ ಸರ್ಕಾರಗಳು ಆ ನೇಕಾರರ ಬಾಳನ್ನು ನಿಕೃಷ್ಟವಾಗಿ ಕಾಣುತ್ತಾ ಬಂದಿವೆ ಇವರ ಕಿವಿಗೆ ಮುಟ್ಟುವಂಥ ನೇಕಾರರ ಕೂಗನ್ನು ನಾವು ಕಾಣುತ್ತಿದ್ದೇವೆ. ದಯವಿಟ್ಟು ಈ ಸರ್ಕಾರವಾದರೂ ಆ ರೀತಿ ಮಾಡಬಾರದೆಂದು ಹೇಳುತ್ತೇನೆ. ಈಗ ತಾವು ಈ ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೀರಿ. ನಿಮಗೆ ನಿಜವಾಗಿಯೂ ಆ ನೇಕಾರರ ಬಗ್ಗೆ ಕಳಕಳಿ ಇದ್ದರೆ, ಹಿರಿಯ ಸದಸ್ಯರಾದ ಬಚ್ಚೇಗೌಡರು ಹೇಳಿದಂತೆ ಒಂದು ತನಿಖಾ ಆಯೋಗವನ್ನು ನೇಮಿಸಬೇಕು. ನಿಷ್ಪಕ್ಷವಾದಂಥ ತನಿಖೆಯನ್ನು ಮಾಡಿ ತಪ್ಪಿತಸ್ಥರು ಮತ್ತು ಖಳನಾಯಕರಂತೆ ವರ್ತಿಸುತ್ತಿರುವವರನ್ನು ಕಠಿಣವಾದಂಥ ಶಿಕ್ಷೆಗೆ ಗುರಿಪಡಿಸುವುದಕ್ಕೆ ಕ್ರಮವನ್ನು ಕೈಗೊಳ್ಳಬೇಕು ಎಂದು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಎಂ. ಮಹದೇವ : ಇದುವರೆಗೆ ಕೆ.ಹೆಚ್.ಡಿ.ಸಿ.ಯ ಅಧ್ಯಕ್ಷರಾಗಿದ್ದಂಥವರು ಈ ರೀತಿಯ ಕಠಿಣವಾದಂಥ ಕ್ರಮವನ್ನು ಕೈಗೊಂಡಿರಲಿಲ್ಲ ಎಂದು ನಾನು ಹೇಳುತ್ತೇನೆ. ಈಗ ನಾನು ಆ ಜವಾಬ್ದಾರಿಯನ್ನು ತೆಗೆದುಕೊಂಡಿದ್ದೇನೆ. ಈಗಾಗಲೇ ನಾನು 2-3 ಜನರನ್ನು ಸಸ್ಪೆಂಡ್ ಮಾಡಿದ್ದೇನೆ. ಯಾರು ಮುಖ್ಯವಾಗಿ ಡೀಲ್ ಮಾಡುತ್ತಿದ್ದರು ಅವರಲ್ಲಿ ಒಬ್ಬರನ್ನು ಸಸ್ಪೆಂಡ್ ಮಾಡಲಾಗಿದೆ, ಮುಂದೆಯೂ ಅಂಥಾದ್ದನ್ನು ಮಾಡಲು ತಯಾರಿದ್ದೇವೆ. ಅದರಲ್ಲಿ ಎರಡನೇ ಮಾತಿಲ್ಲ. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ವರದಿ, ವಿಜಿಲೆನ್ಸ್‌ನವರ ವರದಿ ಮತ್ತು ಮಹಾಲೇಖಪಾಲರ ವರದಿಯನ್ನು ನಾನೇ ಸ್ವತಃ ಸ್ಪಡಿ ಮಾಡಿ ಇದರಬಗ್ಗೆ ಸರ್ಕಾರದ ಮಟ್ಟದಲ್ಲಿ ತನಿಖೆ ಮಾಡಿ ನನಗೆ ವರದಿಯನ್ನು ಕೊಡಬೇಕೆಂದು ಹೇಳಿದ್ದೆ. ನಾನೇ ಚೇರ್‌ಮನ್ ಆಗಿರತಕ್ಕಂಥ ಆ ಸಂಸ್ಥೆಯೊಳಗೆ ನೇಕಾರರಿಗೆ ಅನ್ಯಾಯವಾಗತಕ್ಕಂಥ ಸಂದರ್ಭದಲ್ಲಿ, ಇಷ್ಟು ಅಕ್ರಮಗಳು ನಡೆಯುತ್ತಿರತಕ್ಕಂಥ ಸಂದರ್ಭದಲ್ಲಿ ನಾನು ಕೈಕಟ್ಟಿ ಕುಳಿತುಕೊಳ್ಳುವುದು ಒಳ್ಳೆಯದಲ್ಲವೆಂದು ಅದರ ಕಠಿಣವಾದ ಕ್ರಮವನ್ನು ತೆಗೆದುಕೊಂಡಿದ್ದೇವೆ. ಇದನ್ನು ಮಾತ್ರ ನಾವು ನಂಬಿಸುವುದಾಗಲಿ ಇದರ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಾಗಲೀ ಅಥವಾ ಯಾರದೇ ಪ್ರಭಾವಕ್ಕೆ ಮಣಿಯುವುದಾಗಲೀ ಖಂಡಿತಾ ಇಲ್ಲ. ಯಾರು ತಪ್ಪಿತಸ್ಥರು ಇದ್ದಾರೆ, ನೇಕಾರರಿಗೆ ಯಾರು ಅನ್ಯಾಯ ಮಾಡಿದ್ದಾರೆ ಅವರ ಮೇಲೆ ಕಠಿಣವಾದ ಕ್ರಮವನ್ನು ತೆಗೆದುಕೊಂಡು ನಿಮಗೆ ತಕ್ಷಣದಲ್ಲಿ ತಿಳಿಸುತ್ತೇನೆ ಮತ್ತು ಸದನಕ್ಕೆ ಆ ಮಾಹಿತಿಯನ್ನು ಕೊಡುತ್ತೇನೆ.

(ಈ) ರಾಯಭಾಗ್ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರು ಜಿಲ್ಲಾ ಸಹಕಾರ ಬ್ಯಾಂಕಿನ ಮುಂದೆ ಮುಷ್ಕರ ನಡೆಸುತ್ತಿರುವ ಬಗ್ಗೆ.

ಶ್ರೀ ಉಮೇಶ್ ಎ. ಕತ್ತಿ (ಹುಕ್ಕೇರಿ) : ಮಾನ್ಯ ಅಧ್ಯಕ್ಷರೆ, 13-3-2001 ರಂದು ರಾಯಬಾಗ್ ಸಕ್ಕರೆ ಕಾರ್ಖಾನೆ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದು ಇದಕ್ಕೆ ಇದುವರೆಗೆ ಸರ್ಕಾರದಿಂದ ಉತ್ತರ ಬರಲಿಲ್ಲ. ಇವತ್ತು ಪುನಃ ಮಧ್ಯಾಹ್ನದಿಂದ ಸಂಬಂಧಪಟ್ಟ ಕಾರ್ಖಾನೆಯ ಅಧ್ಯಕ್ಷರು ಜಿಲ್ಲಾ ಮಧ್ಯವರ್ತಿ ಸಹಕಾರಿ ಬ್ಯಾಂಕಿನ ಮುಂದೆ ಮುಷ್ಕರವನ್ನು ಕೈಗೊಂಡಿದ್ದಾರೆ. ಆದರೆ ಇಲ್ಲಿಯವರೆಗೆ ಅವರನ್ನು ಅರೆಸ್ಟ್ ಮಾಡಿಲ್ಲ. ಮಾರ್ಚ್ 31 ವರ್ಷದ ಅಂತಿಮ